# ಸ್ವಾತಂತ್ರ್ಯದ ಹೊಳೆಯಲ್ಲಿ ವಿಜ್ಞಾನದ ಸಾಲುದೀಪಗಳು

ಜೀವನದ ಮಹತ್ವದ ಸಂದರ್ಭಗಳಲ್ಲಿ ನಡೆದುಬಂದ ದಾರಿಯನ್ನು ಹಿಂತಿರುಗಿ ನೋಡುವುದು ಮನುಷ್ಯಸಹಜ ಸ್ವಭಾವ. ಬದುಕಿನ ಸೌಂದರ್ಯದ ಜೊತೆಗೆ, ದಾರಿಯಲ್ಲಿ ಎದುರಾದ ಕಲ್ಲುಮುಳ್ಳುಗಳನ್ನೂ ಹಿನ್ನೋಟ ನೆನಪಿಸುತ್ತದೆ; ಆತ್ಮವಿಮರ್ಶೆಗೆ ಅವಕಾಶ ಕಲ್ಪಿಸುತ್ತದೆ. ಸ್ವಾತಂತ್ರ್ಯದ ಮಹೋತ್ಸವಕ್ಕೆ ಎಪ್ಪತ್ತೈದು ವರ್ಷಗಳ ಸಂಭ್ರಮ ಜೊತೆಯಾಗಿರುವ ಸಂದರ್ಭದಲ್ಲಿ, ಸ್ವತಂತ್ರ ಭಾರತದ ಏಳೂವರೆ ದಶಕಗಳ ಮಹಾಪಯಣವನ್ನು ಅವಲೋಕಿಸಲು ಇದು ಸೂಕ್ತ ಸಂದರ್ಭ. ದೇಶವೊಂದರ ಅಭಿವೃದ್ಧಿಪಥದಲ್ಲಿ, ಆ ದೇಶ ವೈಜ್ಞಾನಿಕ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯೂ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ 'ಆಧುನಿಕ ಭಾರತ' ನೆಟ್ಟ ಮೈಲಿಗಲ್ಲುಗಳನ್ನು ಪಟ್ಟಿಮಾಡುವ ಈ ವಿಶ್ಲೇಷಣೆ, 'ನಮ್ಮ ಹಿರಿಯರು ಗಳಿಸಿದ್ದೇನು? ಸಾಧಿಸಿದ್ದೇನು?' ಎನ್ನುವಂಥ ಬೀಸುಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನವೂ ಆಗಿದೆ. ಸ್ವತಂತ್ರ ಭಾರತದ ವೈಜ್ಞಾನಿಕ ಸಾಧನೆಗಳ ಹೆಮ್ಮೆಯ ಜೊತೆಗೆ ವೈಫಲ್ಯಗಳನ್ನೂ ದಾಖಲಿಸುವ ಈ ಬರಹ, ದೇಶದ ಮುಂದಿರುವ ಸವಾಲುಗಳ ಬಗ್ಗೆಯೂ ಗಮನಸೆಳೆಯುತ್ತದೆ. ಇದು ಸ್ವಾತಂತ್ರ್ಯ ಸಂಭ್ರಮದ ಅಮೃತೋತ್ಸವ ಸಂದರ್ಭಕ್ಕೆ 'ಸುಧಾ' ವಿಶೇಷ.

■ ಗುರುರಾಜ್ ಎಸ್. ದಾವಣಗೆರೆ